ದಿ: **06-08-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : 1, 5 ರಿಂದ 8 ಮತ್ತು 31ನೇ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಜೆ. ಶ್ರೀನಾಥ್ ರಾವ್ ರವರಿಂದ**

1ನೇ ಪ್ರತಿವಾದಿಯಾದ ರಾಧರವರು ನನ್ನ ಅಜ್ಜಿ ಎಂದರೆ ಸರಿ. 2ನೇ ಪ್ರತಿವಾದಿ ಶಾರದಾ ನನ್ನ ತಾಯಿ ಎಂದರೆ ಸರಿ. 3 ರಿಂದ 8ನೇ ಪ್ರತಿವಾದಿಗಳು 2ನೇ ಪ್ರತಿವಾದಿಯ ಸಹೋದರರು ಮತ್ತು ಸಹೋದರಿಯರು ಎಂದರೆ ಸರಿ. 2ನೇ ಪ್ರತಿವಾದಿ ಬೀಜಾಡಿ ಗ್ರಾಮದ ಚಾತ್ರಬೆಟ್ಟುವಿನಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ನಾನು ಮದುವೆಯಾಗುವವರೆಗೆ 2ನೇ ಪ್ರತಿವಾದಿಯ ಜೊತೆ ಇದ್ದೆ ಎಂದರೆ ಸರಿ. ದಾವಾ ಜಮೀನುಗಳು ಗೋಪಾಡಿ ಗ್ರಾಮದಲ್ಲಿವೆ ಎಂದರೆ ಸರಿ. ಬೀಜಾಡಿಯಿಂದ ದಾವಾ ಜಮೀನುಗಳು ಸುಮಾರು 2 ಕಿ.ಮೀ ದೂರದಲ್ಲಿ ಇರುತ್ತವೆ. ಪ್ರಸ್ತುತ ನಾನು ವಕ್ವಾಡಿ ಗ್ರಾಮ ಅಂದರೆ ನನ್ನ ಗಂಡನ ಮನೆಯಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. ನಾನು ಪ್ರೀತಿಸಿ ವಿವಾಹವಾಗಿದ್ದೇನೆ ಎಂದರೆ ಸರಿ.

**2)** ದಾವಾ ಜಮೀನುಗಳನ್ನು ದಿನಾಂಕ 24-11-1958ರಂದು 1ನೇ ಪ್ರತಿವಾದಿ ಅಪ್ರಾಪ್ತ ವಯಸ್ಕಳಾಗಿದ್ದಾಗ ಆಕೆಯ ಮಾವಂದಿರಾದ ರಾಮ ಮತ್ತು ಅಣ್ಣಯ್ಯ ಎನ್ನುವವರು 1ನೇ ಪ್ರತಿವಾದಿಯ ಪರವಾಗಿ ಸ್ವಾಧೀನ ಪಡೆದಿದ್ದಾರೆ ಎಂದರೆ ಸುಳ್ಳು. 1ನೇ ಪ್ರತಿವಾದಿ ವಯಸ್ಕಳಾದ ನಂತರ ರಾಮ ಮತ್ತು ಅಣ್ಣಯ್ಯರವರು ದಿನಾಂಕ 10-12-1969ರಂದು ಆಕೆಯ ಹೆಸರಿಗೆ ನೊಂದಾಯಿತ ಚಾಲಾಗೇಣಿ ಪರಭಾರೆ ಹಕ್ಕು ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿ 1ನೇ ಪ್ರತಿವಾದಿಯ ಕುಟುಂಬದ ಪರವಾಗಿ ಮಾಡಿಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಸದರಿ ದಾಖಲೆಯನ್ನು ನಾನು ಓದಿ ಅದರಲ್ಲಿರುವ ಅಂಶಗಳನ್ನು ತಿಳಿದುಕೊಂಡಿದ್ದೇನೆ. ಸದರಿ ಪ್ರಕಾರ 1ನೇ ಪ್ರತಿವಾದಿ ದಾವಾ ಆಸ್ತಿಗಳನ್ನು ಕ್ರಯಕ್ಕೆ ಪಡೆದಿರುವುದು ಕಂಡುಬರುತ್ತದೆ ಎಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿರುವ ಎಲ್ಲಾ ಆಸ್ತಿಗಳು ಈ ದಾವೆಯ ದಾವಾ ಆಸ್ತಿಗಳು ಎಂದರೆ ಸರಿ. ಸದರಿ ದಾಖಲೆ ಆದ ನಂತರ 1ನೇ ಪ್ರತಿವಾದಿ ದಾವಾ ಆಸ್ತಿಗಳನ್ನು ವೈಯುಕ್ತಿಕವಾಗಿ ಅನುಭವಿಸಿಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ.

**3)** ನಾನು ದಿನಾಂಕ 04-04-1988ರಂದು ಜನಿಸಿರುತ್ತೇನೆ. ದಿನಾಂಕ 10-12-1969ರ ದಾಖಲೆಯಾಗುವ ನಾನು ಜನಿಸಿರಲಿಲ್ಲ ಎಂದರೆ ಸರಿ. ಭೂ ಸುಧಾರಣಾ ಕಾಯ್ದೆ ಬಂದ ನಂತರ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಅಧಿಭೋಗದಾರಿಕೆ ಹಕ್ಕಿನ ಮಂಜೂರಾತಿಗಾಗಿ 1ನೇ ಪ್ರತಿವಾದಿಯು ಕುಂದಾಪುರದ ಭೂನ್ಯಾಯ ಮಂಡಳಿಯ ಮುಂದೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಆ ಸಂದರ್ಭದಲ್ಲಿ

ನನ್ನ ಅಜ್ಜಿಗೆ 38 ವರ್ಷ ವಯಸ್ಸಾಗಿತ್ತು ಎಂದರೆ ಸುಳ್ಳು. ನನ್ನ ಅಜ್ಜಿಯ ವಯಸ್ಸನ್ನು ನಿ.ಪಿ-17ರಲ್ಲಿ 38 ಎಂದು ತೋರಿಸಲಾಗಿದೆ ಎಂದರೆ ಸಾಕ್ಷಿಯು ತಪ್ಪಾಗಿ ನಮೂದಿಸಲಾಗಿದೆ ಎಂದು ಹೇಳುತ್ತಾರೆ. ನಿ.ಪಿ-17ರಲ್ಲಿ "ಚಾಲಾಗೇಣಿ 16 ವರ್ಷ ಮಿಕ್ಕಿ" ಎಂದು ಬರೆದಿದೆ ಎಂದರೆ ಸುಳ್ಳು. ದಾವಾ ಆಸ್ತಿಗಳನ್ನು ಮಂಜೂರು ಮಾಡುವ ಸಂದರ್ಭದಲ್ಲಿ ದಿನಾಂಕ 10-12-1969 ರ ದಾಖಲೆಯನ್ನು ನಮೂದಿಸಿ ಮಂಜೂರು ಮಾಡಿದ್ದಾರೆ ಎಂದರೆ ಸುಳ್ಳು. 1ನೇ ಪ್ರತಿವಾದಿ ಭೂನ್ಯಾಯ ಮಂಡಳಿಯ ಮುಂದೆ ಹೇಳಿಕೆ ನೀಡುವಾಗ ದಾವಾ ಜಮೀನುಗಳು ತನ್ನ ಸ್ವಂತ ಜಮೀನುಗಳು ಎಂದು ಹೇಳಿಕೆ ನೀಡಿದ್ದಾರೆ ಎಂದರೆ ಸುಳ್ಳು. ದಾವಾ ಜಮೀನುಗಳು ಒಟ್ಟು ಕುಟುಂಬದ ಜಮೀನುಗಳು ಎನ್ನುವುದನ್ನು ರುಜುವಾತು ಮಾಡಲು ದಾಖಲೆಗಳನ್ನು ಹಾಜರು ಮಾಡಿದ್ದೇನೆ.

**4)** ದೇವಿ ಎನ್ನುವವರು 1ನೇ ಪ್ರತಿವಾದಿಯ ತಾಯಿ. ದುರ್ಗಿ ಎನ್ನುವವರು ಸದರಿ ದೇವಿಯ ತಾಯಿ ಮತ್ತು 1ನೇ ಪ್ರತಿವಾದಿಯ ಅಜ್ಜಿ. ಮಂಜೂರಾತಿಯ ನಂತರ ಕುಂದಾಪುರದ ವಿಶೇಷ ತಹಶೀಲ್ದಾರರು ದಾವಾ ಜಮೀನುಗಳಿಗೆ ಸಂಬಂಧಿಸಿದಂತೆ 1ನೇ ಪ್ರತಿವಾದಿಯ ಹೆಸರಿಗೆ ಪಟ್ಟಾವನ್ನು ನೀಡಿದ್ದಾರೆ ಎಂದರೆ ಸರಿ, ಸಾಕ್ಷಿ ಮುಂದುವರಿದು ಕುಟುಂಬದ ಪರವಾಗಿ ನೀಡಿದ್ದಾರೆ ಎನ್ನುತ್ತಾರೆ. ಮಂಜೂರಾತಿಯ ನಂತರ ದಾವಾ ಜಮೀನುಗಳ ಖಾತೆ 1ನೇ ಪ್ರತಿವಾದಿಯ ಹೆಸರಿಗೆ ದಾಖಲಾಗಿದೆ ಎಂದರೆ ಸರಿ. 2023ನೇ ಸಾಲಿನವರೆಗೂ ದಾವಾ ಜಮೀನುಗಳ ಪಹಣಿ ಪತ್ರಿಕೆ 1ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಎಂದರೆ ಸುಳ್ಳು.

**5)** 1, 2, 6 ಮತ್ತು 7ನೇ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ದಿನಾಂಕ 04-09-2023ರಂದು 1ನೇ ಪ್ರತಿವಾದಿಯು 8ನೇ ಪ್ರತಿವಾದಿಯ ಪರವಾಗಿ ಒಂದು ನೊಂದಾಯಿತ ವ್ಯವಸ್ಥಾ ಪತ್ರ ಬರೆದುಕೊಟ್ಟಿದ್ದಾಳೆ ಎಂದರೆ ಸರಿ, ಸಾಕ್ಷಿಯು ಮುಂದುವರಿದು 2020ನೇ ಸಾಲಿನ ನಂತರ 1ನೇ ಪ್ರತಿವಾದಿಯ ಮಾನಸಿಕ ಸ್ಥಿತಿ ಸರಿ ಇರಲಿಲ್ಲ ಎನ್ನುತ್ತಾರೆ. 3 ರಿಂದ 5 ಮತ್ತು 8ನೇ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ದಿನಾಂಕ 20-12-2024ರಂದು 1ನೇ ಪ್ರತಿವಾದಿಯು 5 ರಿಂದ 8ನೇ ಪ್ರತಿವಾದಿಗಳ ಹೆಸರಿಗೆ ಮತ್ತೊಂದು ನೊಂದಾಯಿತ ವ್ಯವಸ್ಥಾ ಪತ್ರವನ್ನು ಬರೆದುಕೊಟ್ಟಿದ್ದಾಳೆ ಎಂದರೆ ಸರಿ, ಸಾಕ್ಷಿಯು ಮುಂದುವರಿದು 2020ನೇ ಸಾಲಿನ ನಂತರ 1ನೇ ಪ್ರತಿವಾದಿಯ ಮಾನಸಿಕ ಸ್ಥಿತಿ ಸರಿ ಇರಲಿಲ್ಲ ಎನ್ನುತ್ತಾರೆ. 2020ನೇ ಸಾಲಿನ ನಂತರ 1ನೇ ಪ್ರತಿವಾದಿಯ ಮಾನಸಿಕ ಸ್ಥಿತಿ ಸರಿ ಇಲ್ಲದೇ ಇದ್ದ ಬಗ್ಗೆ ವೈದ್ಯರಿಂದ ವೈದ್ಯಕೀಯ ಪ್ರಮಾಣ ಪತ್ರ ಪಡೆದು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ.

**6)** ಸದರಿ ವ್ಯವಸ್ಥಾ ಪತ್ರಗಳ ಪ್ರಕಾರ ದಾವಾ ಜಮೀನುಗಳ ಖಾತೆಯು 5 ರಿಂದ 8ನೇ ಪ್ರತಿವಾದಿಗಳ ಹೆಸರಿಗೆ ದಾಖಲಾಗಿವೆ ಎಂದರೆ ಸರಿ. 1, 2, 6 ಮತ್ತು 7ನೇ ದಾವಾ ಆಸ್ತಿಗಳನ್ನು 8ನೇ ಪ್ರತಿವಾದಿಯು 31ನೇ ಪ್ರತಿವಾದಿಗೆ ದಿನಾಂಕ 16-11-2024ರಂದು ನೊಂದಾಯಿತ ಕ್ರಯ ಪತ್ರದ ಮುಖಾಂತರ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ 1, 2, 6 ಮತ್ತು 7ನೇ ದಾವಾ ಆಸ್ತಿಗಳ ಖಾತೆ 31ನೇ ಪ್ರತಿವಾದಿಯ ಹೆಸರಿಗೆ ದಾಖಲಾಗಿದೆ ಎಂದರೆ ಸರಿ, ಸಾಕ್ಷಿ ಮುಂದುವರಿದು ಅದನ್ನು ಪ್ರಶ್ನಿಸಿ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ನನ್ನ ತಾಯಿಯಾದ 2ನೇ ಪ್ರತಿವಾದಿ ಮೇಲ್ಮನವಿ ಸಲ್ಲಿಸಿದ್ದಾರೆ ಎನ್ನುತ್ತಾರೆ.

**<u>ಮುಂದುವರಿದ ಪಾಟೀ ಸವಾಲು</u>** : ಪ್ರತಿವಾದಿಯ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿ ಪಾಟೀ ಸವಾಲನ್ನು ಮುಂದುಡಲಾಯಿತು.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು**)**

**ಓ ಹೇ ಕೇ ಸ ಇ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಕುಂದಾಪುರ**